## ಸರ್ಕಾರದ ನಡವಳಿಗಳು

**ವಿಷಯ:** Sri Sai Institute of Nursing Sciences, Ranebennur, Haveri ಈ ಸಂಸ್ಥೆಯಲ್ಲಿ ಬಿ.ಎಸ್ಸಿ. ನರ್ಸಿಂಗ್ ಕೋರ್ಸ್‌ನ್ನು 40 ಸೀಟುಗಳ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ/ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:** ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಏಕಕಡತ ಸಂಖ್ಯೆ: ಇ-2247623-RGUHSB/NUR/AFFI/1477/2026

**ಪ್ರಸ್ತಾವನೆ:**

ಮೇಲೆ ಓದಲಾದ ಏಕ ಕಡತದಲ್ಲಿ ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್ ಇವರ Sri Sai Institute of Nursing Sciences, 6th A Cross, Mruthyunjaya Nagar, Ranebennur, Haveri-581115 ಸಂಸ್ಥೆಯಲ್ಲಿ 2026-27ನೇ ಸಾಲಿನಿಂದ 40 ಸೀಟುಗಳ ಪ್ರವೇಶ ಮಿತಿಯೊಂದಿಗೆ ಬಿ.ಎಸ್ಸಿ. ನರ್ಸಿಂಗ್ ಕೋರ್ಸ್‌ನ್ನು ಹೊಸದಾಗಿ ಪ್ರಾರಂಭಿಸಲು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994 ರ ಕಲಂ 45(2) ರಡಿ ಸಂಸ್ಥೆಯು ಸಲ್ಲಿಸಿದ್ದ ಅರ್ಜಿಯನ್ನು, ಸ್ಥಳೀಯ ತಪಾಸಣಾ ಸಮಿತಿಯ ವರದಿಯನ್ನು, ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ಸಮಿತಿಯ ನಿರ್ಣಯವನ್ನು ಸಲ್ಲಿಸುತ್ತಾ, ಈ ಸಂಸ್ಥೆಯಲ್ಲಿ ಮೇಲ್ಕಂಡ ಕೋರ್ಸನ್ನು 2026-27ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ದಿನಾಂಕ:31.07.2026 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಶಿಫಾರಸ್ಸು ಮಾಡಿದನ್ವಯ ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್ ಇವರ Sri Sai Institute of Nursing Sciences, 6th A Cross, Mruthyunjaya Nagar, Ranebennur, Haveri-581115 ಈ ಕಾಲೇಜಿನಲ್ಲಿ 40 ಸೀಟುಗಳ ಪ್ರವೇಶ ಮಿತಿಯೊಂದಿಗೆ ಬಿ.ಎಸ್ಸಿ. ನರ್ಸಿಂಗ್ ಕೋರ್ಸನ್ನು 2026-27ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 228 ಆರ್ ಜಿಯು 2026, ಬೆಂಗಳೂರು,**

**ದಿನಾಂಕ:20/08/2026.**

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994 ರ ಕಲಂ 45(5)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್ ಇವರ Sri Sai Institute of Nursing Sciences, 6th A Cross, Mruthyunjaya Nagar, Ranebennur, Haveri-581115 ಕಾಲೇಜಿನಲ್ಲಿ 40 ಸೀಟುಗಳ ಪ್ರವೇಶ ಮಿತಿಯೊಂದಿಗೆ ಬಿ.ಎಸ್ಸಿ. ನರ್ಸಿಂಗ್ ಕೋರ್ಸನ್ನು 2026-27ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ.

### ಷರತ್ತು ಮತ್ತು ನಿಬಂಧನೆಗಳು

1. ಸರ್ಕಾರದ ಆದೇಶ ಹೊರಡಿಸಿದ ನಂತರ ಅಂದರೆ, 2026-27ನೇ ಶೈಕ್ಷಣಿಕ ಸಾಲಿನಿಂದ ಕೋರ್ಸನ್ನು ಪ್ರಾರಂಭಿಸತಕ್ಕದ್ದು.

2. **ಈ ಸಂಸ್ಥೆಯು ಬಿ.ಎಸ್ಸಿ. ನರ್ಸಿಂಗ್ ಕೋರ್ಸಿನ ಶೇ. 20 ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.**
3. ಮೇಲ್ಕಂಡ ಕೋರ್ಸುಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.
4. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಿಗದಿ ಪಡಿಸಿರುವ ಪರಿನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಸದರಿ ಟ್ರಸ್ಟ್ /ಸಂಸ್ಥೆ/ಸಂಘವು ನರ್ಸಿಂಗ್ ಕಾಲೇಜನ್ನು ಪ್ರಾರಂಭಿಸಲು ಐ.ಎನ್.ಸಿ/ನಿಯಮಾನುಸಾರ ಅಗತ್ಯವಿರುವ ಕಟ್ಟಡ/ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
5. ಸದರಿ ಸಂಸ್ಥೆಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮೋದನೆ ಪಡೆದ ನಂತರವೇ, ನಿಗಧಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕು ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991 ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
6. ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಸದರಿ ಸಂಸ್ಥೆಯು ಸ್ವಂತ ಆಸ್ಪತ್ರೆಯನ್ನು ಸರ್ಕಾರ ನಿಗಧಿಪಡಿಸಿದ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.
8. ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್, ಫಾರ್ಮಸಿ ಮತ್ತು ಫಿಜಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಮೇಲ್ಕಂಡ ಕೋರ್ಸಿನ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ದಿಷ್ಟ ಅನುಪಾತದಲ್ಲಿ ಪ್ರತಿಬಂದಿಸುವ ಪ್ರಕಾರವೇ ಮಾಡತಕ್ಕದ್ದು.
9. ಮೇಲ್ಕಂಡ ಸಂಸ್ಥೆಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಸಂಸ್ಥೆಯಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.
10. ಟ್ರಸ್ಟ್ ಸಂಸ್ಥೆ/ಸಂಘಗಳು ಚಾಲ್ತಿಯಲ್ಲಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
11. ಟ್ರಸ್ಟ್/ಸಂಸ್ಥೆ/ಸಂಘಗಳು/ಇತ್ಯಾದಿಗಳನ್ನು ಬೇರೆಯವರಿಂದ ಖರೀದಿ/ಮಾರಾಟ ಮಾಡಿರುವುದಿಲ್ಲವೆಂಬ ಬಗ್ಗೆ ಹಾಗೂ ನಿಯಮ ಉಲ್ಲಂಘನೆಯಾಗಿ ಮೂಲ ಟ್ರಸ್ಟಿಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲದೆ ಇರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು
12. ಸದರಿ ನರ್ಸಿಂಗ್ ಕಾಲೇಜು ಪ್ರಾರಂಭಿಸಲು ಸ್ವಂತ ಆಸ್ಪತ್ರೆಯ ಸಮರ್ಪಕ ಕ್ಲಿನಿಕಲ್ ಸೌಲಭ್ಯ ಹೊಂದಿರುವ ಬಗ್ಗೆ ಹಾಗೂ ಸದರಿ ಆಸ್ಪತ್ರೆ ನಿಯಮಾನುಸಾರ ಹಾಸಿಗೆ ಸಾಮರ್ಥ್ಯವನ್ನು ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
13. ಸದರಿ ನರ್ಸಿಂಗ್ ಕಾಲೇಜು ಪ್ರಾರಂಭಿಸಲು ನೀಡಿದ ಬೋಧಕ/ಬೋಧಕೇತರ ಸಿಬ್ಬಂದಿಯ ಬೇರೆ ಯಾವುದೇ ಸಂಸ್ಥೆಗಳಲ್ಲಿ ಪುನರಾವರ್ತನೆ ಆಗದಂತೆ ಆಧಾರ ಲಿಂಕ್ ಹಾಜರಾತಿ ಹೊಂದಿರುವ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
14. ಸದರಿ ನರ್ಸಿಂಗ್ ಕಾಲೇಜನ್ನು ಐ.ಎನ್.ಸಿ. ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳು ನಿಯಮಾನುಸಾರ ನಿಗದಿಪಡಿಸಿರುವ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳತಕ್ಕದ್ದು. ಹೆಚ್ಚುವರಿ ಶುಲ್ಕ ಪಡೆದ್ದಲ್ಲಿ, ಸಂಬಂಧಪಟ್ಟ ನರ್ಸಿಂಗ್ ಕಾಲೇಜನ್ನು ಸಂಯೋಜನೆಯನ್ನು ಹಿಂಪಡೆಯುವುದು ಮತ್ತು ವಿಶ್ವವಿದ್ಯಾಲಯದಿಂದ ಸೂಕ್ತ ಕಾನೂನು ಕ್ರಮಕೈಗೊಳ್ಳತಕ್ಕದ್ದು.

15. ಪ್ರತಿ ಸಂಸ್ಥೆಯಲ್ಲಿನ ಮಾನವ ಸಂಪನ್ಮೂಲದ ವಿವರಗಳನ್ನು ಆಯಾ ಸಂಸ್ಥೆಗಳ ವೆಬ್ ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು. ಒಂದೇ ಸಿಬ್ಬಂದಿಯನ್ನು ಬೇರೆ-ಬೇರ ಸಂಸ್ಥೆಗಳಲ್ಲಿ ತೋರಿಸದಂತೆ ಕ್ರಮವಹಿಸತಕ್ಕದ್ದು. ಈ ಬಗ್ಗೆ ವೇತನ ಚೀಟಿ ಹಾಗೂ ಫಾರ್ಮ್-16ನ್ನು ಪರಿಶೀಲಿಸತಕ್ಕದ್ದು.

16. ಮೂಲಭೂತ ಸೌಲಭ್ಯಗಳ ಬಗ್ಗೆ ಜಿಯೋ-ಟ್ಯಾಗಿಂಗ್ ಮಾಡತಕ್ಕದ್ದು.

17. ಮೇಲ್ಕಂಡ ಸಂಸ್ಥೆಗಳ ಬಗ್ಗೆ ಐಎನ್‌ಸಿ ಮಾರ್ಗಸೂಚಿಯಲ್ಲಿನ ಯಾವುದೇ ಸೌಲಭ್ಯಗಳ ಬಗ್ಗೆ ಕೊರತೆ ಕಂಡುಬಂದಲ್ಲಿ ಸ್ಥಳ ತಪಾಸಣಾ ಸಮಿತಿ ಹಾಗೂ ಆರ್‌ಜಿಯುಹೆಚ್‌ಎಸ್ ಗಳೇ ನೇರ ಹೊಣೆಗಾರರಾಗತಕ್ಕದ್ದು.

18. ಸಂಸ್ಥೆಗಳು ಕ್ಲಿನಿಕಲ್ ಸೌಲಭ್ಯದ ಸಂಬಂಧ ತೋರಿಸುವ ಆಸ್ಪತ್ರೆಗಳಲ್ಲಿ ಇರುವ OPD/IPD ಮಾಹಿತಿಯನ್ನು ನಮೂದಿಸತಕ್ಕದ್ದು.

19. ಐಎನ್‌ಸಿ ಮಾರ್ಗಸೂಚಿಯನ್ವಯ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಕಾಲಕಾಲಕ್ಕೆ ಆರ್‌ಜಿಯುಹೆಚ್‌ಎಸ್ ಖಚಿತಪಡಿಸಿಕೊಳ್ಳತಕ್ಕದ್ದು.

20. ಪ್ರತಿ ಸಂಸ್ಥೆಯ ಬೋಧಕ ಸಿಬ್ಬಂದಿಗಳು Nurses Registration and Tracking System (NRTS)ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.

21. ಸಂಸ್ಥೆಯ ಪ್ರವೇಶಮಿತಿಯ ಬಗ್ಗೆ ವಿವರಗಳನ್ನು ನೋಂದಣಿ ಸಂಖ್ಯೆಯನ್ನು ಒಳಗೊಂಡಂತೆ ಅಂಕಿ ಅಂಶಗಳು ಪ್ರವೇಶ ಮೊದಲಾದ ವಿವರಗಳನ್ನು ಸೀಟು ಹಂಚಿಕೆಯಾಗುವ ಮುನ್ನ ಸಂಸ್ಥೆಯ ಹಾಗೂ ಆರ್‌ಜಿಯುಹೆಚ್‌ಎಸ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

22. ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋಮೆಟ್ರಿಕ್‌ನೊಂದಿಗೆ ಹಾಗೂ ಆಧಾರ್ ಸಂಖ್ಯೆಯೊಂದಿಗೆ ಜೋಡಿಸುವ ಮೂಲಕ (Adhaar Based) ದಾಖಲಿಸತಕ್ಕದ್ದು.

23. ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಗೆ ಮಂಜೂರಾದ ಸೀಟುಗಳು, ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ಸಂಖ್ಯೆ, ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಸಂಸ್ಥೆಯ ಕಾರ್ಯನಿರ್ವಹಣೆಯ ಸ್ಥಿತಿಯನ್ನು ಒಳಗೊಂಡ ವಿವರಗಳನ್ನು Nurses Registration and Tracking System (NRTS)ನಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದ್ದು.

24. ಸದರಿ ನರ್ಸಿಂಗ್ ಕಾಲೇಜುಗಳು ಸಂಯೋಜನೆ/ಮಂಜೂರಾತಿ ಇತ್ಯಾದಿಗಳ ಬಗ್ಗೆ ಕಾಲಕಾಲಕ್ಕೆ ಐ.ಎನ್.ಸಿ./ರಾಜ್ಯ ಸರ್ಕಾರ/ವಿಶ್ವವಿದ್ಯಾಲಯ/ಕೆ.ಎನ್.ಸಿ./ಇತರೆ ಸಂಬಂಧಪಟ್ಟ ಪ್ರಾಧಿಕಾರಗಳ ಹೊರಡಿಸುವ ಸುತ್ತೋಲೆ/ಆದೇಶ/ನಿಯಮಗಳು/ ಅಧಿಸೂಚನೆ/ ವಿನಿಯಮಗಳು/ಅಧಿನಿಯಮಗಳಲ್ಲಿನ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು. ಉಲ್ಲಂಘನೆಯಾದ್ದಲ್ಲಿ ಅಥವಾ ತಪ್ಪು ಮಾಹಿತಿ ನೀಡಿದ್ದಲ್ಲಿ, ಸಂಬಂಧಪಟ್ಟ ನರ್ಸಿಂಗ್ ಕಾಲೇಜುಗಳು ಮತ್ತು ಅದರ ಟ್ರಸ್ಟ್/ಸಂಸ್ಥೆ/ಸಂಘ/ಇತ್ಯಾದಿಗಳ ಮೇಲೆ ಮತ್ತು ತಪಾಸಣಾ/ಶಿಫಾರಸ್ಸು ತಂಡದ ಸದಸ್ಯರ ಮೇಲೆ ವಿಶ್ವವಿದ್ಯಾಲಯವು ಕಾನೂನುಕ್ರಮ ಜರುಗಿಸತಕ್ಕದ್ದು.

25. ಸದರಿ ಸಂಸ್ಥೆಯು ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ, 1994 ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 48 ನೇ ಪ್ರಕರಣದಲ್ಲಿ ಪ್ರಸ್ತುತ ಸದರಿ ಸಂಸ್ಥೆಗೆ ನೀಡಲಾಗಿರುವ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ವೈದ್ಯಕೀಯ ಶಿಕ್ಷಣ ಇಲಾಖೆ

**ರಿಗೆ:**
. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4 ನೇ ಟಿ ಬ್ಲಾಕ್, ಬೆಂಗಳೂರು -560 041.